**ಸಿಸಿ** ನಂ. 1444/2024
ಸಿ.ಡಬ್ಲೂ-19 ಪಿ.ಡ್ಲೂ:12

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ**z**

| | | |
|---|---|---|
| **ಸಾಕ್ಷಿದಾರನ ಹೆಸರು** | : | ಡಿ ಹುಲಗಪ್ಪ |
| **ತಂದೆ ಹೆಸರು** | : | ಹನುಮಂತಪ್ಪ |
| **ವಯಸ್ಸು** | : | 56 ವರ್ಷ |
| **ಉದ್ಯೋಗ** | : | ಸಿ ಪಿ ಐ, ಸಂಚಾರಿ ಪೊಲೀಸ ಠಾಣೆ ಹೊಸಪೇಟೆ |
| **ವಾಸ ಸ್ಥಳ** | : | **ಹೊಸಪೇಟೆ** |

**ದಿನಾಂಕಃ** 04.06.2026 **ರಂದು ಸಾಕ್ಷಿಗೆ ಪ್ರಮಾಣಿಕರಿಸಲಾಯಿತು**

ಮುಖ್ಯ ವಿಚಾರಣೆ: ಸರಕಾರಿ ಸಹಾಯಕ ಅಭೀಯೋಜಕ ರವರಿಂದ.

ನಾನು ದಿ:02.01.2023 ರಿಂದ ದಿ:02.02.2024 ರ ವರೆಗೆ ಸಿಂದಗಿ ವೃತ್ತದಲ್ಲಿ ಸಿಪಿಐ ಎಂದು ಕೆಲಸ ಮಾಡಿದ್ದೇನೆ.

2. ದಿ. 14.12.2023 ರಂದು ಈ ಪ್ರಕರಣದ ಕಡತವನ್ನು ಚಾಸಾ:18 ರವರಿಂದ ಪಡೆದುಕೊಂಡು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ.

ದಿ:15.12.2023 ರಂದು ಗುನ್ನಾ ಜಾಗಕ್ಕೆ ಹೋಗಿ ಪಂಚರಾದ ಚಾಸಾ:3 ಮತ್ತು 4 ರವರ ಸಮಕ್ಷಮ ಗುನ್ನಾ ಜಾಗದ ಪಂಚನಾಮೆಯನ್ನು ಮಧ್ಯಾಹ್ನ 3.30 ರಿಂದ 4.30 ರ ವರೆಗೆ ಮಾಡಿರುತ್ತೇನೆ. ಸದರಿ ಪಂಚನಾಮೆಯು ಈಗಾಗಲೇ ನಿಪಿ:5 ಎಂದು ಗುರುತಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ:5 ಸಿ ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ಗುರುತಿಸಿದ್ದು, ಅವುಗಳು ಈಗಾಗಲೇ ನಿಪಿ:6 ಮತ್ತು 7 ಎಂದು ಗುರುತಾಗಿರುತ್ತದೆ. ಪಂಚನಾಮೆ ಕಾಲಕ್ಕೆ ತೆಗೆದ ಹಾತ್ ನಕಾಶೆಯನ್ನು ಗುರುತಿಸಿದ್ದು ಅದನ್ನು ನಿಪಿ:20 ಎಂದು

ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿಃ20 ಎ ಎಂದು ಗುರುತಿಸಲಾಯಿತು. ಅದೇ ದಿನ ವಾಹನ ಸಂಃಕೆಎ 28-ಡಿ-7521 ನ್ನು ಚಾಸಾಃ3 ಮತ್ತು 4 ರವರ ಸಮಕ್ಷಮ ಪೊಲೀಸ ಠಾಣಾ ಆವರಣದಲ್ಲಿ ಸಂಜೆ 5.00 ರಿಂದ 5.45 ರ ವರೆಗೆ ಪಂಚನಾಮೆಯನ್ನು ಮಾಡಿ ಜಪ್ತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯು ಈಗಾಗಲೇ ನಿಪಿಃ8 ಎಂದು ಗುರುತಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ8 ಸಿ ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಪೋಟೋಗಳನ್ನು ಗುರುತಿಸಿದ್ದು, ಅವುಗಳು ಈಗಾಗಲೇ ನಿಪಿಃ9 ಮತ್ತು 10 ಎಂದು ಗುರುತಾಗಿರುತ್ತದೆ. ಅದೇ ದಿನ ಚಾಸಾಃ9 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ಆರ್ ಟಿ ಓ ರವರಿಗೆ ವಾಹನ ಯಾಂತ್ರಿಕ ಪರೀಕ್ಷೆಯ ಸಲುವಾಗಿ ಪತ್ರವನ್ನು ಬರೆದಿರುತ್ತೇನೆ. ಸದರಿ ಐ ಎಮ್ ವಿ ವದಿಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿಃ16 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ16 ಎ ಎಂದು ಗುರುತಿಸಲಾಯಿತು. ದಿಃ30.12.2023 ರಂದು ಮೃತರ ಪಿ ಎಮ್ ವರದಿಯನ್ನು ಪಡೆದು ಕಡತಕ್ಕೆ ಸೇರಿಸಿರುತ್ತೇನೆ. ಅದು ಈಗಾಗಲೇ ನಿಪಿಃ15 ಎಂದು ಗುರುತಾಗಿದ್ದು, ಸಾಕ್ಷಿಯ ಸಹಿಯನ್ನು ಸಹಿಯನ್ನು ನಿಪಿಃ15 ಎ ಎಂದು ಗುರುತಿಸಲಾಯಿತು. ದಿಃ03.01.2024 ರಂದು ಚಾಸಾಃ11 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ19.01.2024 ರಂದು ಪ್ರಕರಣದ ಆರೋಪಿಯು ಠಾಣೆಗೆ ಹಾಜರಾಗಿದ್ದು, ವಿಚಾರಣೆ ಮಾಡಿ ದಸ್ತಗೀರಿ ಕ್ರಮ ಜರುಗಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸದರಿ ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಹಾಜರು ಇದ್ದಾರೆ. ದಿಃ02.02.2024 ರಂದು ವರ್ಗಾವಣೆಯಾಗಿದ್ದರಿಂದ ಕಡತವನ್ನು ಚಾಸಾಃ20 ರವರಿಗೆ

ಹಸ್ತಾಂತರಿಸಿರುತ್ತೇನೆ.

<u>ಪಾಟೀ ಸವಾಲುಃ ಶ್ರೀ ಎನ್ ಎಸ್ ಬಿ ಆರೋಪಿ ಪರ ವಕೀಲರಿಂದಃ</u>

1. ದಿಃ15.12.2023 ರಟಂದು ಗುನ್ಹಾ ಜಾಗಕ್ಕೆ ಹೋಗಿ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿದ್ದೇನೆ ಎಂದು ಮತ್ತು ಹಾತ್ ನಕಾಶೆಯನ್ನು ತಯಾರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ಹಾ ಜಾಗದಲ್ಲಿ ಫೋಟೋ ತೆಗೆದು ಹಾತ್ ನಕಾಶೆಯನ್ನು ತಯಾರಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ವಾಹನವನ್ನು ಜಪ್ತಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ9, 11 ಮತ್ತು 12 ರವರ ಹೇಳಿಕೆಗಳನ್ನು ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತರ ವಾರಸುದಾರರಿಗೆ ಅನುಕೂಲವಾಗಲೀ ಎಂದು ನಾನು ಮತ್ತು ಚಾಸಾಃ18 ರವರು ಸೇರಿ ಸುಳ್ಳು ಪ್ರಕರಣ ದಾಖಲಿಸಿಕೊಂಡು ಅದಕ್ಕೆ ಪೂರ್ವಕವಾಗಿ ಪಂಚನಾಮೆ ಮತ್ತು ಇತರೆ ದಾಖಲೆಗಳನ್ನು ಸೃಷ್ಟಿಸಿದ್ದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.**

**Sd/-**

**ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.**

**ಸಿಂದಗಿ**